ಸಿವಿಕ್

(Regd., Public Charitable Trust No 599 / 94--95 IV)
ನಂ.6, ಕಸ್ತೂರಿ ಅಪಾರ್ಟ್‌ಮೆಂಟ್ಸ್, 2ನೇ ಮಹಡಿ, ನಂ.35/23,
ಲಾಂಗ್‌ಫೋರ್ಡ್ ರಸ್ತೆ ತಿರುವು, ಶಾಂತಿನಗರ, ಬೆಂಗಳೂರು–560025.
ಟೆಲಿಫ್ಯಾಕ್ಸ್: 080-41144126, ಇಮೇಲ್: info@civicspace.in, Internet: www.civicspace.in

ಜುಲೈ 23, 2015

ಆಡಳಿತಾಧಿಕಾರಿಗಳು,
ಬಿಬಿಎಂಪಿ ಎನ್.ಆರ್.ಚೌಕ,
ಬೆಂಗಳೂರು–560002

**ಮಾನ್ಯರೇ,**

**ವಿಷಯ: ಎಸ್‌ಡಬ್ಲ್ಯೂಎಂ – 2015 ಜೂನ್‌ನಲ್ಲಿ ಪ್ರಕಟಿಸಿರುವ ಕಸದ ಗುತ್ತಿಗೆ ವಿಷಯದ ಮೇಲೆ ನಮ್ಮ ಅನಿಸಿಕೆ.**

**ಒಟ್ಟಾರೆ ಕಾಳಜಿಗಳು:**

1. **ನೀಡಲಾಗಿರುವ ಕಸ ವಿಲೇವಾರಿಯನ್ನು ಹೊರಗುತ್ತಿಗೆಯನ್ನು ನಿಲ್ಲಿಸಬೇಕು ಮತ್ತು ಗುತ್ತಿಗೆ ಪೌರಕಾರ್ಮಿಕರನ್ನು ಕಾಯಂಗೊಳಿಸುವುದು.**

   ಮೊದಲನೆಯಾಗಿ, ನಮಗಿರುವ ಮುಖ್ಯ ಆಯ್ಕೆಯೆಂದರೆ – ಬಿಬಿಎಂಪಿಯು ಕಸ ವಿಲೇವಾರಿಯ ತನ್ನ ಜವಾಬ್ದಾರಿಯನ್ನು ಗುತ್ತಿಗೆದಾರರಿಗೆ ಕೊಡುವುದನ್ನು ನಿಲ್ಲಿಸಬೇಕು. ಏಕೆಂದರೆ, ಕಸ ವಿಲೇವಾರಿಯು ಬಿಬಿಎಂಪಿಯ "ಪ್ರಮುಖ" ಮತ್ತು "ಶಾಶ್ವತ ನಿರಂತರ" ಚಟುವಟಿಕೆಯಾಗಿದ್ದು, ಗುತ್ತಿಗೆ ಕಾರ್ಮಿಕ (ನಿರ್ಮೂಲನೆ ಮತ್ತು ನಿಯಂತ್ರಣ) ಕಾಯ್ದೆ ಪ್ರಕಾರ ಹೊರ ಗುತ್ತಿಗೆ ನೀಡುವಂತಿಲ್ಲ. ಆದ್ದರಿಂದ ಬಿಬಿಎಂಪಿ ಇದರ ಸಂಪೂರ್ಣ ಜವಾಬ್ದಾರಿ ತೆಗೆದುಕೊಳ್ಳಬೇಕು ಮತ್ತು ಪ್ರಸ್ತುತ ಇರುವ ಗುತ್ತಿಗೆ ಕೆಲಸಗಾರರನ್ನು ಖಾಯಂ ಕೆಲಸಗಾರರನ್ನಾಗಿ ಪರಿಗಣಿಸಬೇಕೆಂದು ನಮ್ಮ ಮನವಿಯಾಗಿದೆ. ಗುತ್ತಿಗೆದಾರರು ಚುನಾಯಿತ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ನಡುವಿನ ಅಪವಿತ್ರ ನಂಟಿನಿಂದಾಗಿ, ಕಾನೂನುಗಳು, ನಿಯಮಗಳು, ಗುತ್ತಿಗೆ ನಿಬಂಧನೆಗಳು ಮುಂತಾದವುಗಳನ್ನು ಗುತ್ತಿಗೆದಾರರು ತಮಗೆ ಅರಿವಿದ್ದರೂ ಉಲ್ಲಂಘಿಸುತ್ತಿದ್ದಾರೆ. ಇದರಿಂದಾಗಿ ತಳಮಟ್ಟದಲ್ಲಿ ಕೆಲಸಗಾರರು ಅತಿಹೆಚ್ಚು ಶೋಷಣೆಗೊಳಗಾಗುತ್ತಿದ್ದಾರೆ.

ಈ ಕೆಳಕಂಡ ಲಿಂಕ್‌ಗಳಲ್ಲಿ ನೀಡಲಾದ ವರದಿಯಂತೆ, ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗ ಕೂಡ, ನಗರಸಭೆ ಕೆಲಸಗಾರರಿಗೆ ಇರುವ ಗುತ್ತಿಗೆ ವ್ಯವಸ್ಥೆಯನ್ನು ತೆಗೆದುಹಾಕುವಂತೆ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ ಮತ್ತು ಈ ಶಿಫಾರಸ್ಸನ್ನು ಆದಷ್ಟು ಬೇಗ ಜಾರಿಗೊಳಿಸುವುದಾಗಿ ರಾಜ್ಯ ಸಚಿವ ಸಂಪುಟವೂ (ಕ್ಯಾಬಿನೇಟ್) ಕೂಡ ಭರವಸೆ ನೀಡಿದೆ.

http://www.megamedianews.in/index.php/139129/safai-karmacharis-may-get-relief-from-contract-system/

http://www.forwiderreach.com/?p=88687

ಕೊಡುವಂತಿಲ್ಲ. ಅದೇ ರೀತಿ, ಕಸದ ಹೊಸ ಗುತ್ತಿಗೆಗಳನ್ನು ಕೊಡುವುದು ಕೇವಲ ವ್ಯರ್ಥ ಪ್ರಯತ್ನವೆಂಬುದು ನಮ್ಮ ಅಭಿಪ್ರಾಯವಾಗಿದೆ. ಬಾಂಬೆ ಕೈಗಾರಿಕಾ ನ್ಯಾಯಾಲವು ಕಸ ವಿಲೇವಾರಿಯನ್ನು ಗುತ್ತಿಗೆದಾರರಿಗೆ ನೀಡುವುದು ಕಾನೂನುಬಾಹಿರವೆಂದು ತೀರ್ಪು ನೀಡಿದೆ. **ಆದ್ದರಿಂದ ಬಿಬಿಎಂಪಿಯ ಈಗಿನ ಗುತ್ತಿಗೆ ಕೆಲಸಗಾರರನ್ನು ಖಾಯಂ ಕೆಲಸಗಾರರಾಗಿ ಪರಿಗಣಿಸುವ ಕೆಲಸ ಪ್ರಾರಂಭಿಸಬೇಕು ಮತ್ತು ಈ ಸಂಪೂರ್ಣ ಕಾರ್ಯವನ್ನು ತಾನೇ ವಹಿಸಬೇಕು.**

2. **ಒಣ ತ್ಯಾಜ್ಯ ಸಂಸ್ಕರಣೆ ಮತ್ತು ಪುನರ್‌ಬಳಕೆ ವ್ಯವಸ್ಥೆಯಲ್ಲಿ ಅನೌಪಚಾರಿಕ ಕೆಲಸಗಾರರ ವಿಲೀನಗೊಳಿಸುವುದು**

ಕಸ ಸಂಗ್ರಹಣೆ, ವಿಂಗಡಣೆ, ಪುನರ್‌ಬಳಕೆ ಮತ್ತು ಒಣತ್ಯಾಜ್ಯದ ವಿಲೇವಾರಿಗಳಲ್ಲಿ ಅನೌಪಚಾರಿಕ ಕೆಲಸಗಾರರು–ಉದಾಹರಣೆಗೆ ಚಿಂದಿ ಆಯುವವರನ್ನು ಬಳಸಿಕೊಳ್ಳಲಾಗುವುದು ಎಂಬುದರ ಬಗ್ಗೆ, ನೂತನ ಗುತ್ತಿಗೆ ಮಾರ್ಗಸೂಚಿಗಳಲ್ಲಿ ಎಲ್ಲೂ ತಿಳಿಸಿಲ್ಲ.

ಸುಮಾರು 30000ದಷ್ಟಿರುವ ಚಿಂದಿ ಆಯುವವರು, ನಗರದಲ್ಲಿ ಒಣತ್ಯಾಜ್ಯದ ಗಣನೀಯ ಪ್ರಮಾಣವನ್ನು ಸಂಗ್ರಹಿಸುವುದು ಮತ್ತು ಪುನರ್‌ಬಳಕೆ ಮಾಡುವಲ್ಲಿ ತೊಡಗಿಕೊಂಡಿದ್ದಾರೆ. ಆದರೆ ಎಲ್ಲಾ ಒಣತ್ಯಾಜ್ಯದ ಸಂಗ್ರಹಣೆ, ವಿಂಗಡಣೆ ಮತ್ತು (DWCCs) ಡಿಡಬ್ಲೂಸಿಸಿಯಲ್ಲಿ ಪುನರ್‌ಬಳಕೆಯ ಹಕ್ಕನ್ನು ಗುತ್ತಿಗೆದಾರರಿಗೆ ನೀಡಿದರೆ, ಅನೌಪಚಾರಿಕ ಕೆಲಸಗಾರರು ಜೀವನೋಪಾಯದಿಂದ ವಂಚಿತರಾಗುತ್ತಾರೆ.

ಬಿಬಿಎಂಪಿಯು ತನ್ನ ಸಮರ್ಥ ಪ್ರಾಜೆಕ್ಟ್‌ನಲ್ಲಿರುವಂತೆ, ಅನೌಪಚಾರಿಕ ವಲಯದ ತಾಜ್ಯ ಆಯುವವರ (ಚಿಂದಿ ಆಯುವವರು) ಸ್ವ–ಸಹಾಯ ಗುಂಪನ್ನು ರಚಿಸಿ, ವಯಕ್ತಿಕ ಅದೇ ರೀತಿ ದೊಡ್ಡಮಟ್ಟದ ತ್ಯಾಜ್ಯ ಉತ್ಪಾದಕ ಘಟಕಗಳಿಂದ ತ್ಯಾಜ್ಯ ಸಂಗ್ರಹಿಸಲು, ವಿಂಗಡಿಸಲು ಮತ್ತು ಒಣತ್ಯಾಜ್ಯ ಸಂಗ್ರಹ ಕೇಂದ್ರಗಳಲ್ಲಿ (DWCCs) ಸಂಸ್ಕರಣೆ ಮಾಡಲು ಅನುಮತಿ ನೀಡಬಹುದಾಗಿದೆ. ಇದರಿಂದ ಉದ್ಯೋಗಾವಕಾಶ ದೊರಕುತ್ತದೆ ಮತ್ತು ಅವರು ಉದ್ಯಮಶೀಲರಾಗುವುದರಿಂದ ಉತ್ತಮ ಜೀವನೋಪಾಯವನ್ನು ನಡೆಸುತ್ತಾರೆ.

**3. ಕಸವು ಸಂಪನ್ಮೂಲವಾಗಿದ್ದು, ಅದರಿಂದ ಆದಾಯ ಸೃಷ್ಟಿಸುವ "ವ್ಯವಹಾರ ಮಾದರಿ" ರೂಪಿಸಬೇಕು.**

ಸೂಕ್ತ ರೀತಿಯಲ್ಲಿ ವಿಂಗಡಣೆ ಮಾಡಿದರೆ, ಕಸವು ಸಂಪನ್ಮೂಲವಾಗಿದ್ದು, ಅದರಿಂದಲೇ ಆದಾಯ ಗಳಿಸಬಹುದಾಗಿದೆ. ಆದರೆ ಕಸವಿಲೇವಾರಿಗೆ ಬಿಬಿಎಂಪಿ ಏಕೆ ನೂರಾರು ಕೋಟಿ ನೀಡಬೇಕು? ಗುತ್ತಿಗೆ ವ್ಯವಸ್ಥೆ ಮುಂದುವರಿದರೆ, ಕಸ ಸಂಗ್ರಹಣೆ ಮತ್ತು ಸಂಸ್ಕರಣೆ ಹಕ್ಕನ್ನು ಬಿಬಿಎಂಪಿಯು ಹರಾಜು ಪ್ರಕ್ರಿಯೆಯನ್ನು ನಡೆಸಿ ನೀಡಬೇಕು. ಕಲ್ಲಿದ್ದಲು, ಸ್ಪೆಕ್ಟ್ರಂ ಇತ್ಯಾದಿ ಹರಾಜು ಪ್ರಕ್ರಿಯೆಯಂತೆ, ಯಾರು ಅತಿಹೆಚ್ಚು ಬಿಡ್ ಮಾಡುತ್ತಾರೊ ಅಂತಹವರಿಗೆ ಈ ಹಕ್ಕನ್ನು ನೀಡಬೇಕು. ಇದರಲ್ಲಿ ಬಿಬಿಎಂಪಿಯು ಕೆಲಸಗಾರರ ಸಂಬಳ ಮತ್ತು ತಳ್ಳುಗಾಡಿಗಳು, ಆಟೋಗಳು, ಕಸಬುಟ್ಟಿಗಳು ಇತ್ಯಾದಿ ಸ್ವತ್ತುಗಳನ್ನು ಮಾತ್ರ ಪಾವತಿಸುವುದು.

ಅಥವಾ ಬಿಬಿಎಂಪಿಯು ಹೊರಗುತ್ತಿಗೆ ನೀಡುವುದನ್ನು ನಿಲ್ಲಿಸಿ, ತನ್ನ ಸ್ವಂತ "ವ್ಯವಹಾರ ಮಾದರಿ"ಯನ್ನು ರೂಪಿಸಿ, ಕಸ ಸಂಗ್ರಹ ಹಂತದಲ್ಲೇ ವಿಂಗಡಣೆ ಮತ್ತು ಅದೇ ಸಂಸ್ಕರಿತವಾಗಿರುವಂತೆ ಖಾತರಿಪಡಿಸಿ ಆದಾಯ ಸೃಷ್ಟಿಸುವುದು ಅಥವಾ ಹಸಿ ಮತ್ತು ಒಣತ್ಯಾಜ್ಯಗಳನ್ನು ಸಂಸ್ಕರಣೆ ಮಾಡುವವರಿಗೆ ಮಾರುವುದು ಅಥವಾ ಹರಾಜು ಹಾಕುವುದು.

ಕಳೆದ ಬಾರಿ ಗುತ್ತಿಗೆಗಳನ್ನು ನೀಡಿದ ಸಂದರ್ಭದಲ್ಲಿ ಸಿವಿಕ್ ಆಯೋಜಿಸಿದ್ದ ಸಮಾಲೋಚನೆಯಲ್ಲಿ ಮಾಹಿತಿಯನ್ನು ನೀಡಿದ ಎಸ್‌ಡಬ್ಲೂಎಂ ಮುಖ್ಯಸ್ಥರಾಗಿರುವ ಬಿಬಿಎಂಪಿಯ ಕಾರ್ಯನಿರ್ವಾಹಕ ಅಭಿಯಂತರರೇ ಹಾಕಿದ ಅಂದಾಜು ಲೆಕ್ಕದ ಪ್ರಕಾರವೇ ಬಿಬಿಎಂಪಿಯ ಕಸದಿಂದ ಸುಮಾರು ರೂ. 300 ಕೋಟಿಗಳಷ್ಟು ಆದಾಯ ಸೃಷ್ಟಿಸಬಹುದು. ಅದೇ ರೀತಿ, ಸಾರಿಗೆಗಾಗಿ ವೆಚ್ಚ ಮಾಡಲಾಗುತ್ತಿರುವ ರೂ. 400 ಕೋಟಿಗಳನ್ನು ಉಳಿಸಬಹುದಾಗಿದೆ. ಇದೂ ಕೂಡ ಗ್ರಹಿಕೆ ಮತ್ತು ಅಂದಾಜುಗಳ ಆಧಾರಿತವಾಗಿದ್ದು, ಕಸವಿಲೇವಾರಿಗೆ ರೂ.400 ರಿಂದ ರೂ. 600 ಕೋಟಿಗಳಿಗೆ ವೆಚ್ಚವನ್ನು ಹೆಚ್ಚಿಸಬೇಕಾಗುತ್ತದೆ ಅಥವಾ ಇದರಲ್ಲಿ ತಪ್ಪು ತಿಳುವಳಿಕೆ ಮತ್ತು ತಪ್ಪು ಲೆಕ್ಕಾಚಾರವಿರುವಂತೆ ಕಾಣುತ್ತಿದೆ.

**4. ಪೌರಕಾರ್ಮಿಕರು ಮತ್ತು ಅನೌಪಚಾರಿಕ ವಲಯದ ಕಸ ಆಯುವವರ ಸ್ವಸಹಾಯ ಸಂಘಗಳ ರಚನೆ :**

ಹೇಗಿದ್ದರೂ ಬಿಬಿಎಂಪಿಯು, ಸಂಸ್ಕರಣೆ ಮಾಡುವುದಕ್ಕೆ ತಳ್ಳುಗಾಡಿ, ಆಟೋಗಳು, ಭೂಮಿ ಮತ್ತು ಮೂಲಸೌಕರ್ಯಗಳು ಮುಂತಾದವುಗಳನ್ನು ನೀಡುತ್ತಿದೆ. ಹಾಗಾಗಿ, ಈಗಿರುವ ಪೌರಕಾರ್ಮಿಕರ ಸ್ವಸಹಾಯ ಸಂಘಗಳನ್ನು ಕಟ್ಟಿ, ಹಸಿ ತ್ಯಾಜ್ಯದ ಸಂಗ್ರಹಣೆ ಮತ್ತು ಸಂಸ್ಕರಣೆ ಮಾಡುವಂತೆ ಅವರಿಗೆ ವಹಿಸಿಕೊಡಬಹುದು ಮತ್ತು ಅದರಿಂದ ಬರುವ ಜೈವಿಕ ಇಂಧನ ಅಥವಾ ಜೈವಿಕ ಗೊಬ್ಬರದಿಂದ ಆದಾಯ ಮಾಡಿಕೊಳ್ಳುವಂತೆ ಬಿಡುವುದು.

ಪೌರಕಾರ್ಮಿಕರು ಮತ್ತು ಚಿಂದಿ ಆಯುವವರ ಸ್ವಸಹಾಯ ಸಂಘಗಳನ್ನು ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್ ಅಡಿ (NULM) ಸೇರಿಸಬಹುದು. ಅದೇ ರೀತಿ, ಕಸ ಸಂಗ್ರಹಕರೇ ಮೂಲದಲ್ಲೇ ಕಸ ವಿಂಗಡಣೆ ಮಾಡಿಸುವಂತೆ ಪ್ರೋತ್ಸಾಹಿಸುವುದು ಮತ್ತು ಪ್ರತ್ಯೇಕ ವಿಭಾಗಗಳಲ್ಲಿ ಸಂಗ್ರಹ ಮಾಡುವುದರಿಂದ ಉತ್ಸಾಹ ಮೂಡಿ ನಿವಾಸಿಗಳೂ ಸಹ ತಮ್ಮ ಕಸವನ್ನು ವಿಂಗಡಿಸುತ್ತಾರೆ. ಇದರಿಂದ ಪ್ರಸ್ತುತ ಏನು ನಡೆಯುತ್ತಿದೆಯೊ ಅದಕ್ಕೆ ವಿರುದ್ದವಾಗಿ ಅಂದರೆ, ಸಂಗ್ರಹಕಾರರು ಎಲ್ಲಾ ಕಸವನ್ನು ಒಟ್ಟಿಗೆ ಮಿಶ್ರಣ ಮಾಡುವುದನ್ನು ತಪ್ಪಿಸಬಹುದು.

**5. ದೊಡ್ಡ ಪ್ರಮಾಣದ ಉತ್ಪಾದಕರು ತಮ್ಮ ಸ್ವಂತ ತ್ಯಾಜ್ಯವನ್ನು ಏಕೆ ಸಂಸ್ಕರಿಸಬೇಕು?**

ಎಲ್ಲಾ ಆಸ್ತಿ ಮಾಲೀಕರು ತಮ್ಮ ಆಸ್ತಿ ತೆರಿಗೆ ಜೊತೆಗೆ ಘನ ತ್ಯಾಜ್ಯ ನಿರ್ವಹಣೆ ಸೆಸ್/ಕರವನ್ನು ಕಟ್ಟುತ್ತಿದ್ದಾರೆ. ಜೊತೆಗೆ ಕಸ ವಿಲೇವಾರಿಯು ಬಿಬಿಎಂಪಿಯು ಕಡ್ಡಾಯವಾಗಿ ಮಾಡಲೇಬೇಕಾದ ಕಾರ್ಯವಾಗಿದೆ. ಆಗಿದ್ದ ಮೇಲೆ ಅವರು ಸ್ವಂತ ಕಸವನ್ನು ತಮ್ಮ ಖರ್ಚಿನಲ್ಲಿ ಏಕೆ ಸಂಸ್ಕೃಣೆ ಮಾಡಬೇಕು ಎಂಬುದು ಗೊತ್ತಾಗುತ್ತಿಲ್ಲ.

ವಸತಿ ಸಂಕೀರ್ಣ/ಸಮುಚ್ಛಯಗಳೂ ಸಹ ವಯಕ್ತಿಕ ಮನೆಗಳನ್ನು ಒಳಗೊಂಡಿರುವುದರಿಂದ, ವಯಕ್ತಿಕ ಬಂಗಲೆಗಳಲ್ಲಿ ವಾಸಿಸುತ್ತಿರುವ ಮನೆಗಳವರು ತಮ್ಮ ಸ್ವಂತ ತ್ಯಾಜ್ಯವನ್ನು ಸಂಸ್ಕರಿಸಬೇಕು ಎಂಬುದು ಕಾನೂನಿನ ಅಡಿಯಲ್ಲಿ ಅಸಮಾನತೆಯನ್ನು ಸೃಷ್ಟಿಸುತ್ತದೆ. ಹೆಚ್ಚಾಗಿ, ಬೆಂಗಳೂರಿನಲ್ಲಿ ಹೆಚ್ಚೆಚ್ಚು ಅಪಾರ್ಟ್‌ಮೆಂಟ್‌ಗಳನ್ನು ಕಟ್ಟಿರುವುದರಿಂದ, ಬಹಳಷ್ಟು ಬೇಗ ಹಲವಾರು ವಯಕ್ತಿಕ ಮನೆಗಳು ಇಲ್ಲದಿರಬಹುದು ಮತ್ತು ಅವರೆಲ್ಲರಿಂದ ಪ್ರತಿದಿನ 10ಕೆಜಿಗಿಂತ ಹೆಚ್ಚು ತ್ಯಾಜ್ಯ ಉತ್ಪತ್ತಿಯಾಗಬಹುದು. ಒಂದು ವೇಳೆ ಬಹುತೇಕ ಪ್ರತಿಯೊಬ್ಬರೂ ತಮ್ಮ ತ್ಯಾಜ್ಯವನ್ನು ತಮ್ಮ ಸ್ವಂತ ಖರ್ಚಿನಲ್ಲಿ ಸಂಸ್ಕರಣೆ ಮಾಡಿವುದಾದರೆ, ಬಿಬಿಎಂಪಿಯು ತನ್ನ ಮಾಡಲೇಬೇಕಾದ ಕಸ ಸಂಗ್ರಹ ಮತ್ತು ವಿಲೇವಾರಿ ಕಾರ್ಯದಿಂದ ತಪ್ಪಿಸಿಕೊಳ್ಳುವುದಿಲ್ಲವೇ?

ದೊಡ್ಡ ಮಟ್ಟದಲ್ಲಿ ಕಸ ಉತ್ಪಾದಿಸುವ ಹೊಟೇಲ್‌ಗಳು ಮತ್ತು ಕಲ್ಯಾಣ ಮಂಟಪಗಳು ಇತ್ಯಾದಿಗಳಿಂದ, ಬಿಬಿಎಂಪಿಯ ಪ್ರತ್ಯೇಕವಾಗಿ ಕಸ ಸಂಗ್ರಹಿಸಬಹುದು, ಆದರೆ ಅಂತಹ ವಾಣಿಜ್ಯ ಘಟಕಗಳಿಗೆ ಹೆಚ್ಚಿನ ಎಸ್‌ಡಬ್ಲೂಎಂ ಸೆಸ್ ವಿಧಿಸಬಹುದು. ಅಥವಾ ಕೊನೆಯ ಪಕ್ಷ, ಯಾರು ತಮ್ಮ ಸ್ವಂತ ತ್ಯಾಜ್ಯವನ್ನು ಸಂಸ್ಕರಿಸುವಂತಹವರಿಗೆ ಎಸ್‌ಡಬ್ಲ್ಯು ಸೆಸ್ ಪಾವತಿಯನ್ನು ಮನ್ನಾ ಮಾಡುವುದು ಅಥವಾ ಆಸ್ತಿ ತೆರಿಗೆಯಲ್ಲಿ ರಿಯಾಯಿತಿಯನ್ನು ನೀಡಿವುದು. ಇದರಿಂದ ಮನೆಗಳು/ಸಂಸ್ಥೆಗಳು ತಮ್ಮ ಸ್ವಂತ ಕಸವನ್ನು ತಾವೇ ನಿರ್ವಹಸಲು ಪ್ರೋತ್ಸಾಹಿಸಿದಂತಾಗುತ್ತದೆ.

**ನಿರ್ಧಿಷ್ಟ ಕಾಳಜಿಗಳು:**

**6. ಬಿಬಿಎಂಪಿಯು ಮನಗೆಳಿಗೆ ಕಸಬುಟ್ಟಿಗಳನ್ನು ನೀಡುವುದು ಅಥವಾ ಮಾರಾಟ ಮಾಡುವುದು.**

ತ್ಯಾಜ್ಯ ಸಂಗ್ರಹಕಾರರು ಮನೆಗಳಿಂದ ಕಸ ಸಂಗ್ರಹಿಸಬೇಕಾದ ರೀತಿಯನ್ನು ಗುತ್ತಿಗೆಯಲ್ಲಿ ನಿರ್ಧಿಷ್ಟಪಡಿಸಬೇಕು. ಪ್ರಸ್ತುತ, ಪ್ಲಾಸ್ಟಿಕ್ ಚೀಲಗಳನ್ನು ತಡೆಯುವ ಉದ್ದೇಶದಿಂದ, ಬಹುತೇಕ ನಿವಾಸಿಗಳಿಂದ ನೇರವಾಗಿ ತ್ಯಾಜ್ಯ ನೀಡುವಂತೆ ಕೇಳಲಾಗುತ್ತಿದೆ. ಆದರೆ, ಬಿಡಿಯಾಗಿ/ನೇರವಾಗಿ ಕಸ ನೀಡುವುದರಿಂದ, ಅದು ಹೊರ ಚೆಲ್ಲಿ ಕೆಲಸಗಾರರಿಗೆ ಮತ್ತು ಪರಸರಿಕ್ಕೆ ತೊಂದರೆಯಾಗಬಹುದು ಮತ್ತು ರಸ್ತೆಬದಿಗಳಲ್ಲಿ ಚಲ್ಲಾಪಿಲ್ಲಿಯಾಗಿ ಬಿಳುವ ಕಾರಣದಿಂದ, ಪ್ರಪಂಚದಾದ್ಯಂತ ನಗರಗಳಲ್ಲಿ ಬಿಡಿಯಾಗಿ ಕಸ ನೀಡುವುದನ್ನು ನಿಷೇಧಿಸಿದ ನಿಯಮಗಳಿವೆ. ಈ ದೇಶಗಳಲ್ಲಿ ಯಾವಾಗಲೂ ಮುಚ್ಚಿದ ಸ್ಥಿತಿಯಲ್ಲಿಯೇ ಕಸವನ್ನು ಕೊಡಲಾಗುತ್ತದೆ ಮತ್ತು ತೆಗೆದುಕೊಳ್ಳಲಾಗುತ್ತದೆ. ಅಲ್ಲಿನ ಮುನಿಸಿಪಾಲಿಟಿ/ನಗರಸಭೆಯು ಅಲ್ಲಿನ ಪ್ರತಿಯೊಂದು ಮನೆಗೂ ಮುಚ್ಚಳವಿರುವ ಕಸದ ಬುಟ್ಟಿಯನ್ನು ಕೊಟ್ಟಿದೆ. ಆ ಬುಟ್ಟಿಗೆ ಆ ಮನೆಯ ವಿಳಾಸಕ್ಕೆ ಕೊಂಡಿಯಾಗಿರುವಂತೆ ಒಂದೊಂದು ಸಂಕೇತ ಸಂಖ್ಯೆಯನ್ನು ನೀಡಿರುತ್ತದೆ. ಇದರಿಂದ ಕಸವಿಲೇವಾರಿಗೆ ಸಂಬಂಧಿಸಿದ ನಿಯಮಗಳನ್ನು ಉಲ್ಲಂಘಿಸಿದರೆ, ಅಂತಹ ಮನೆಯನ್ನು ಗುರುತಿಸಬಹುದು. ಬೆಂಗಳೂರಿನಲ್ಲಿ ಕೆಲವು

ಸಂಸ್ಥೆಗಳು, ಎರಡು ಕಸದಬುಟ್ಟಿಗಳು ಮತ್ತು ಒಂದು ಚೀಲದ ವಿಧಾನವನ್ನು ಅಳಡಿಸಿಕೊಳ್ಳುವ ಪ್ರಯತ್ನವನ್ನು ಮಾಡಿದ್ದು, ಆ ವಿಧಾನಗಳನ್ನು/ನಿಯಮಗಳನ್ನು ಗುತ್ತಿಗೆಯಲ್ಲಿ ಸೇರಿಸಬಹುದಾಗಿದೆ.




**ಮನೆಗಳಿಗೆ ಬಣ್ಣದ ಸಂಕೇತ ಗುರುತು ಮತ್ತು ಮುಚ್ಚಳವಿರುವ/ಇದರೊಂದಿಗೆ, ವಸತಿ ಸಮುಚ್ಚಯಗಳಿಗೆ ವಿವಿಧ ಅಳತೆಗಳಲ್ಲಿ ಹಿಡಿಕೆಗಳು ಮತ್ತು ಚಕ್ರಗಳಿರುವ ಕಸದ ಬುಟ್ಟಿಗಳು.**



**ವಯಕ್ತಿಕ/ಅಪಾರ್ಟ್‌ಮೆಂಟ್ ಮನೆಗಳ ಬುಟ್ಟಿಯನ್ನು ತಾಂತ್ರಿಕವಾಗಿ ಎತ್ತುವುದು**

ಬಹುತೇಕ ದೇಶಗಳಲ್ಲಿ, ಮನೆಗಳು ತಮ್ಮ ಕಸದ ಬುಟ್ಟಿಗಳನ್ನು ರಾತ್ರಿಯಲ್ಲಿ ನಿರ್ಧಿಷ್ಟಪಡಿಸಿದ ಸಮಯಗಳಲ್ಲಿ ತಮ್ಮ ಮನೆಯ ಹೊರಗೆ ರಸ್ತೆಯ ಬದಿಯಲ್ಲಿ ನಿರ್ಧಿಷ್ಟಪಡಿಸಿದ ಸ್ಥಳದಲ್ಲಿ ಇಡುತ್ತಾರೆ ಮತ್ತು ಬೆಳಗ್ಗೆ ನಿರ್ಧಿಷ್ಟಪಡಿಸಿದ ಸಮಯಗಳಲ್ಲಿ ಪುನ: ಆ ಬುಟ್ಟಿಗಳನ್ನು ತೆಗೆದುಕೊಳ್ಳಲಾಗುತ್ತದೆ. ಆದ್ದರಿಂದ ಮನೆಗಳವರಿಗೆ 10 ಗಂಟೆಗಳವರೆಗೆ ಸಮಯವಕಾಶವಿದ್ದು, ತಮಗೆ ಹೊಂದಿಕೆಯಾಗುವಂತಹ ಅವಕಾಶವಿರುವುದರಿಂದ, ಈ ಅವಧಿಯಲ್ಲಿ ತಮಗೆ ಸೂಕ್ತವಾದ ಯಾವುದೇ ಸಮಯದಲ್ಲಿ ಕಸವನ್ನು ಹೊರಗಿಡಬಹುದಾಗಿದೆ. ಸಂಗ್ರಹ

ವ್ಯಾನ್ ಬರುವ ನಿರ್ಧಿಷ್ಟಪಡಿಸಿದ ಸಮಯದಲ್ಲಿ ಮನೆಯವರು ಕಸವನ್ನು ನೀಡಲು ಆ ಸ್ಥಳದಲ್ಲಿ ಇರಬೇಕಾದ ಅಗತ್ಯವೇನೂ ಇಲ್ಲ. ಈ ಪದ್ಧತಿ ಬೆಂಗಳೂರಿಗೆ ಅಗತ್ಯವಿದೆ. ಈ ಕಾರಣಗಳಿಗಾಗಿ ಕಸ ಸಂಗ್ರಹಕಾರರಿಗೆ/ಆಟೋಗಳಿಗೆ ಕಸ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ, ನಂತರ ಅವರ ಕಸವನ್ನು ಸಂಗ್ರಹದ ಸ್ಥಳದಲ್ಲಿ ಎಸೆದುಬಿಡುತ್ತಾರೆ.

7. **ತ್ಯಾಜ್ಯ ಸಂಗ್ರಹಣೆಗೆ ಮೂಲಸೌಕರ್ಯಗಳಿಗೆ ಸಂಬಂಧಿಸಿದಂತೆ ಅನುಸೂಚಿ 3ಎ'ನಲ್ಲಿ ಕನಿಷ್ಠ ನಿರ್ಧಿಷ್ಟತೆಗಳನ್ನು ಹೆಚ್ಚಿಸಬೇಕಿದೆ.**

ಸ್ಪಷ್ಟವಾದ ಉತ್ತಮ ಮೂಲಸೌಕರ್ಯಗಳ ಅಗತ್ಯವಿದ್ದು, ಗುತ್ತಿಗೆದಾರರು ಅವುಗಳನ್ನು ಅಳವಡಿಸಬೇಕಾಗಿದೆ. ಕಸ ಅಥವಾ ಬೀದಿ ತ್ಯಾಜ್ಯಗಳನ್ನು ಸಂಗ್ರಹಿಸಲು ಪ್ರಸ್ತುತ ಬಳಸುತ್ತಿರುವ ತಳ್ಳುಗಾಡಿಗಳಲ್ಲಿ ಬುಟ್ಟಿ/ಡಬ್ಬಗಳೇ ಇರುವುದಿಲ್ಲ. ತಳ್ಳುಗಾಡಿಯಲ್ಲಿ ಹರಿದ ಚಾಪೆ ಅಥವಾ ಒಡೆದ ಶೀಟ್‌ನ್ನು ಹಾಸಿ, ಅದರಲ್ಲಿಯೇ ಕಸವಿಟ್ಟುಕೊಳ್ಳಲಾಗುತ್ತಿದೆ. ಈ ರೀತಿಯ ಮೂಲಸೌಕರ್ಯದಲ್ಲಿ ವಿಂಗಡಿಸಿದ ಕಸವನ್ನು ಸಂಗ್ರಹಿಸಲು ಆಗುವುದೇ ಇಲ್ಲ. ಬೆಂಗಳೂರಿನಾದ್ಯಂತ ಬಳಸುತ್ತಿರುವ ತಳ್ಳುಗಾಡಿಯ ಸ್ಥಿತಿಯ ಕುರಿತ ಫೋಟೋಗಳನ್ನು ಈ ಕೆಳಗೆ ಲಗತ್ತಿಸಿದೆ.



**ಡಬ್ಬಗಳಿಲ್ಲದ ತಳ್ಳುಗಾಡಿ**



**ಪರಿಸರಕ್ಕೆ ಹೊರಚಾಚಿದ ಸಂಗ್ರಹಿಸಿದ ತ್ಯಾಜ್ಯ**

ಆದಾಗ್ಯೂ, ಗುತ್ತಿಗೆಯಲ್ಲಿ ತಿಳಿಸುವುದೆಂದರೆ:
"ಈ ಒಪ್ಪಂದದ ಅವಧಿಯ ಎಲ್ಲಾ ಸಮಯದಲ್ಲೂ ಅನ್ವಯಿಸುವ ಕಾನೂನುಗಳನ್ನು ಅನುಸರಿಸುವುದು ಮತ್ತು ಮುಖ್ಯವಾಗಿ ಗುತ್ತಿಗೆ ಕಾರ್ಮಿಕರಿಗೆ/ನೌಕರರಿಗೆ ಸಂಬಂಧಿಸಿದ ಎಲ್ಲಾ ಕಾನೂನುಗಳನ್ನು, ಅಂದರೆ ಅವರ ಕೆಲಸದ ಪರಿಸರ, ಆರೋಗ್ಯ ಮತ್ತು ಸುರಕ್ಷತೆ ದೃಷ್ಟಿಯಿಂದ ಅನುಸರಿಣೆಯನ್ನು ಖಾತರಿಪಡಿಸುವುದು;" ಪೌರಕಾರ್ಮಿಕರು ದುರ್ವಾಸನೆಯಲ್ಲಿ ಮತ್ತು ಇಂತಹ ಮೂಲಸೌಕರ್ಯದಿಂದಾಗಿ, ಆಗಾಗ ಕೈಯಿಂದಲೇ ತ್ಯಾಜ್ಯ ನಿರ್ವಹಣೆ ಮಾಡುವುದರಿಂದ ತೊಂದರೆಗೆ ಒಳಗಾಗುತ್ತಿದ್ದಾರೆ. 2000ನೇ ಇಸವಿಯನ್ನು ನವೀಕರಿಸದ ಹಳೆಯ ಕಿತ್ತುಹೋದ ಸ್ಥಿತಿಯಲ್ಲಿರುವ ತಳ್ಳುಗಾಡಿಗಳನ್ನೇ ಕಷ್ಟಪಟ್ಟು ಬಳಸಬೇಕು. MoEF ಒಪ್ಪಂದ ನಿಯಮಗಳೇ ಹೇಳುವಂತೆ, ಮನೆಗಳ ತ್ಯಾಜ್ಯವನ್ನು ರಸ್ತೆ ತ್ಯಾಜ್ಯಗಳೊಂದಿಗೆ ಮಿಶ್ರಣ ಮಾಡಬಾರದು. ಆದ್ದರಿಂದ, ಪೌರಕಾರ್ಮಿಕರು ರಸ್ತೆ ಕಸವನ್ನು ಮಾತ್ರ ಸಂಗ್ರಹಿಸಬೇಕು ಮತ್ತು ಆಟೊಗಳು ಮನೆಗಳ ಕಸವನ್ನು ಸಂಗ್ರಹಿಸಬೇಕು ಎಂಬ ಬಗ್ಗೆ ಗುತ್ತಿಗೆಯಲ್ಲಿ ನಿಧಿಷ್ಟಪಡಿಸಬೇಕು.

ನಿಯಮಗಳಲ್ಲಿ ಉಲ್ಲೇಖಿಸಿದ ನಿಬಂಧನೆಗಳನ್ನು ಪೂರೈಸಬೇಕು, ಅಂದರೆ ಮೂಲಸೌಕರ್ಯಗಳಲ್ಲಿ ತಳ್ಳುಗಾಡಿಗಳು/ಮೂರುಚಕ್ರದ ಗಾಡಿ[ಸೈಕಲ್]ಗಳು/ ಮುಚ್ಚಳವಿರುವ ಟ್ರಾಲಿಗಳು, ಬೀದಿ ಕಸವನ್ನು ಮಾತ್ರ ಸಂಗ್ರಹಿಸಲು ಪೌರಕಾರ್ಮಿಕರಿಗಾಗಿ ಕಂಟೈನರ್‌ಗಳನ್ನು ಒಳಗೊಂಡ ಮೂಲಸೌಕರ್ಯಗಳ ಬಗ್ಗೆ ಗುತ್ತಿಗೆಯಲ್ಲಿ ನಿಧಿಷ್ಟಪಡಿಸಬೇಕಿದೆ. (ಪೌರಕಾರ್ಮಿಕರು ಬೀದಿ ಕಸವನ್ನು ಸಂಗ್ರಹಿಸಲು ಬಳಸುವ, ಮುಚ್ಚಳ ಸಹಿತ ಕಂಟೈನರ್‌ಗಳನ್ನು ಒಳಗೊಂಡ ಟ್ರಾಲಿಗಳ ಚಿತ್ರಗಳನ್ನು ಈ ಕೆಳಗೆ ಲಗತ್ತಿಸಿದೆ)



**ಬೀದಿ ಕಸ ಸಂಗ್ರಹಣೆಗಿರುವ ಮುಚ್ಚಳ ಸಹಿತ ಬಹು ಡಬ್ಬಿಗಳನ್ನೊಳಗೊಂಡ ಟ್ರಾಲಿ**

ಮುಚ್ಚಳ ಅಥವಾ ಕೊಂಡಿ ಮುಚ್ಚಳ ಸಹಿತವಾದ ಕಂಟೈನರ್‌ಗಳನ್ನು ಒಳಗೊಂಡ ಆಟೊಗಳಿಂದ ಮಾತ್ರ ಮನೆ ಮನೆಗಳಿಂದ ಕಸ ಸಂಗ್ರಹಿಸುವ ಬಗ್ಗೆ ನಿರ್ಧಿಷ್ಟವಾಗಿ ಸಷ್ಟಪಡಿಸಬೇಕು. ಈಗ ಟೆಂಡರ್‌ನಲ್ಲಿ ನಿರ್ಧಿಷ್ಟಪಡಿಸಿರುವ ಟಿಪ್ಪರ್‌ಗಳನ್ನು ಒಳಗೊಂಡ ಆಟೋಗಳು ಕಸವನ್ನು ಪರಿಸರಕ್ಕೆ ಹೊರಚಾಚಲು ಕಾರಣವಾಗುತ್ತಿವೆ ಮತ್ತು ನಂತರ ನೆಲಕ್ಕೆ ಸುರಿಯಲಾಗುತ್ತದೆ. ಆದರೆ ಸಂಗ್ರಹ ಸ್ಥಳಕ್ಕೆ ಕಾಂಪ್ಯಾಕ್ಟರ್ ಟಿಪ್ಪರ್ ಬರುವುದನ್ನು, ಸಮನ್ವಯತೆ ಮಾಡಲು ಯಾವಾಗಲೂ ಕಷ್ಟವಾಗುತ್ತಿದೆ.
ಬೀದಿ ಕಸ ಸಂಗ್ರಹಿಸಲು ಕಂಟೈನರ್ ಒಳಗೊಂಡ ಟ್ರಾಲಿಗಳು ಮತ್ತು ಮನೆ ಮನೆಗಳಿಂದ ಕಸ ಸಂಗ್ರಹಿಸಲು ಕಂಟೈನರ್‌ಗಳನ್ನೊಳಗೊಂಡ ಆಟೊಗಳು, ಮುಚ್ಚಿದ ಸ್ಥಿತಿಯಲ್ಲಿ ಕಸ ಸಂಗ್ರಹಣೆ ಮಾಡುವುದನ್ನು

ಖಾತರಿಪಡಿಸಬೇಕು. ಅಂದರೆ ಪರಿಸರಕ್ಕೆ ಹೊರಚಲ್ಲದಂತೆ ನೋಡಿಕೊಳ್ಳಬೇಕು ಅಥವಾ ಸಾರ್ವಜನಿಕವಾಗಿ ಕಾಣಬಾರದು ಮತ್ತು ದುರ್ವಾಸನೆ, ರೋಗವಾಹಕಗಳು, ನೊಣಗಳು, ಸೊಳ್ಳೆಗಳು, ಇಲಿಹೆಗ್ಗಣಗಳು, ಬೀದಿ ಪ್ರಾಣಿಗಳಿಗೆ ಇತ್ಯಾದಿಗಳಿಗೆ ಕಾರಣವಾಗಬಾರದು ಮತ್ತು ಕೆಲಸಗಾರರಿಗೆ ಹಾಗೂ ನಾಗರಿಕರಿಗೆ ಅಪಾಯವನ್ನುಂಟು ಮಾಡಬಾರದು. (ಆ ರೀತಿಯ ಮುಚ್ಚಳ ಸಹಿತ ಕಂಟೈನರ್‌ಗಳನ್ನು ಒಳಗೊಂಡ ವಾಹನಗಳ ಚಿತ್ರಗಳನ್ನು ಈ ಕೆಳಗೆ ಲಗತ್ತಿಸಿದೆ)



**ಗೃಹಬಳಕೆ ತ್ಯಾಜ್ಯವನ್ನು ಸಂಗ್ರಹಿಸಲು ಇರುವ, ಮುಚ್ಚಳ ಸಹಿತ ಕಂಟೈನರ್ ಒಳಗೊಂಡ ಆಟೋ**

**8. ನಗರಸಭೆಯ ಘನತ್ಯಾಜ್ಯಗಳ ಮಾಧ್ಯಮಿಕ/ದ್ವಿತೀಯ ಶೇಕರಣೆ**

ಆದಾಗ್ಯೂ, ಟೆಂಡರ್ ಪ್ರಕಾರ:

"ಪರಿಸರ, ಆರೋಗ್ಯ ಮತ್ತು ಸುರಕ್ಷೆ ವಿಷಯಗಳಿಗೆ ಸಂಬಂಧಿಸಿದ ಕಾನೂನುಗಳು, ನಗರಸಭೆ ಘನತ್ಯಾಜ್ಯ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಗಳು 2000 ಸೇರಿದಂತೆ ಇದಕ್ಕೆ ಸಂಬಂಧಿಸಿದ ನೀತಿಗಳು ಮತ್ತು ಮಾರ್ಗಸೂಚಿಗಳಿಗೆ ಅನ್ವಯಿಸುವ ವಹಿಸಿದ ಅಂಶಗಳನ್ನು ಖಾತರಿಪಡಿಸುವುದು"

ಈಗಿರುವ MoEF ಒಪ್ಪಂದ ನಿಯಮಗಳಲ್ಲಿ ತಿಳಿಸಿದಂತೆ ಅಗತ್ಯತೆಗೆ ಅನುಗುಣವಾಗಿ ಸಂಗ್ರಹ ಸ್ಥಳಗಳಲ್ಲಿ ಮಾಧ್ಯಮಿಕ ತ್ಯಾಜ್ಯ ಶೇಕರಣೆ ಬುಟ್ಟಿಗಳನ್ನು ಇಡಬೇಕು, ಆದರೆ ಟೆಂಡರ್‌ನಲ್ಲಿ ಆ ಬಗ್ಗೆ ಅವಕಾಶವೇ ಇಲ್ಲವಾಗಿದೆ. ಪ್ರಸ್ತುತ, ತಳ್ಳುಗಾಡಿಯಿಂದ ಅಥವಾ ಆಟೊ ಟಿಪ್ಪರ್‌ಗಳಿಂದ ನೇರವಾಗಿ ಲಾರಿಗೆ ವರ್ಗಾಯಿಸುವುದಿಲ್ಲ. ಅಂದರೆ ಮೊದಲು ಕಸವನ್ನು ನೆಲದ ಮೇಲೆ ಸುರಿಯಲಾಗುತ್ತದೆ, ಆ ನಂತರ ಅದೆಲ್ಲವನ್ನೂ ಕೈಯಿಂದಲೇ ಎತ್ತಿ ಹಾಕಲಾಗುತ್ತಿದೆ. ಇದು ನಿಯಮಗಳ ಉಲ್ಲಂಘನೆಯಾಗಿದೆ.



ತಳ್ಳುಗಾಡಿಗಳಿಂದ ತಂದು ನೆಲದ ಮೇಲೆ ಸುರಿಯುವುದರಿಂದ ಕಸವು ಪರಿಸರದಲ್ಲಿ ಚೆಲ್ಲಿರುವುದು




ಕಸವನ್ನು ಕೈಯಿಂದಲೇ ನಿರ್ವಹಿಸುತ್ತಿರುವುದು.




ಕೈಯಿಂದಲೇ ಕಸವನ್ನು ಎತ್ತುತ್ತಿರುವುದು




**ಕೈಯಿಂದಲೇ ಕಸವನ್ನು ಕಾಂಪ್ಯಾಕ್ಟರ್‌ಗೆ ತುಂಬುತ್ತಿರುವುದು**

ದ್ವಿತೀಯ/ಮಾಧ್ಯಮಿಕ ತ್ಯಾಜ್ಯ ಕಂಟೈನರ್ ಇಲ್ಲದೆ, ಅದೇ ಸ್ಥಿತಿ ಮುಂದುವರಿಸುವ ಸಾಧ್ಯವಿದೆ.

ಇದು ಕೇವಲ MoEF ನಿಯಮಗಳ ಉಲ್ಲಂಘನೆ ಮಾತ್ರವಲ್ಲ. ಅಂದರೆ, ಮಾಧ್ಯಮಿಕ ಶೇಕರಣೆಗೆ, ಅದರಲ್ಲೂ ವಿಶೇಷವಾಗಿ ಮಾರುಕಟ್ಟೆ ಪ್ರದೇಶಗಳಲ್ಲಿ ಕಂಟೈನರ್‌ಗಳು/ನೈರ್ಮಲ್ಯ ಬುಟ್ಟಿಗಳನ್ನು ಇಡದಿದ್ದರೆ, ಅದನ್ನು ವಾಸ್ತವದಲ್ಲಿ ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಲು ಆಗುವುದಿಲ್ಲ. ಸಿಮೆಂಟ್ ಜಗುಲಿಯ ಮೇಲೆ ಇಡಬಹುದಾದ ಸುಂದರವಾಗಿ ಕಾಣುವ ಫೈಬರ್ ಬುಟ್ಟಿಗಳು (ಚಿತ್ರವನ್ನು ಕೆಳಗೆ ಲಗತ್ತಿಸಿದೆ) ಲಭ್ಯವಿದ್ದು, ಅವುಗಳ ಸರಿಯಾದ ಬಳಕೆ ಬಗ್ಗೆ ಜನರಿಗೆ ತಿಳುವಳಿಕೆ ನೀಡಬೇಕಿದೆ. ಬಣ್ಣದ ಸಂಕೇತಗಳಿರುವ ಡಬ್ಬಿಗಳನ್ನು ಸಂಸ್ಕರಣೆ ಮಾಡುವ ಸ್ಥಳಕ್ಕೆ ತಳ್ಳಿಕೊಂಡು ಹೋಗಬಹುದು ಅಥವಾ ತಾಂತ್ರಿಕವಾಗಿ ಎತ್ತಿಕೊಂಡು ಹೋಗಿ ಕಾಂಪ್ಯಾಕ್ಟರ್‌ಗಳ ಮೂಲಕ ಖಾಲಿ ಮಾಡಬಹುದು ಮತ್ತು ಕೈಯಿಂದ ನಿರ್ವಹಿಸುವುದನ್ನು ತಡೆಯಬಹುದು.



**ಬೀದಿ ಹಂತದಲ್ಲಿ ಮಾಧ್ಯಮಿಕ ಕಸ ಸಂಗ್ರಹಣೆಗೆ ಬಣ್ಣದ ಸಂಕೇತವನ್ನೊಳಗೊಂಡ ಕಸದ ಬುಟ್ಟಿಗಳು**



**ಬೀದಿ ಬದಿಯ ಕಸದ ಬುಟ್ಟಿಯನ್ನು ತಾಂತ್ರಿಕವಾಗಿ ಖಾಲಿ ಮಾಡುತ್ತಿರುವ ಕಾಂಪ್ಯಾಕ್ಟರ್**

**9. ಕಸದ ಶೇಕರಣೆ ಕುರಿತ MoEF ನಿಯಮಗಳ ಸಾರಾಂಶ:**

"ಸಂಗ್ರಹಿಸಿದ ಕಸವನ್ನು ಸಮುದಾಯದ ಕಸದ ಬುಟ್ಟಿಗೆ ವರ್ಗಾಯಿಸಬೇಕು. ಶೇಕರಣೆ ಸೌಲಭ್ಯಗಳು ನೈರ್ಮಲ್ಯದಿಂದ ಕೂಡಿರಬೇಕು; ಏರಿಯಾದಲ್ಲಿ ಉತ್ಪಾದಿತವಾದ ಎಲ್ಲಾ ಕಸವನ್ನು ಒಟ್ಟಿಗೆ ತೆಗೆದುಕೊಳ್ಳುವುದು; ಬಳಕೆದಾರರಿಗೆ ದೊರಕುವಂತಿರಬೇಕು; ತ್ಯಾಜ್ಯದ ಶೇಕರಣೆಯು ವಾತಾವರಣಕ್ಕೆ ಸೋರಿಕೆಯಾಗದಂತಿರಬೇಕು ಮತ್ತು ಕಸದ ಬುಟ್ಟಿಗಳು ಸುಂದರ, ಬಳಕೆದಾರರ ಸ್ನೇಹಿ ಮತ್ತು ನಿರ್ವಹಣೆಗೆ ಸುಲಭವಾಗಿರಬೇಕು.

ಎ. ಜೈವಿಕ ವಿಘಟನಾ (ಕೊಳೆಯುವಿಕೆ) ಕಸದ ಬುಟ್ಟಿಗಳಿಗೆ – ಹಸಿರು

ಬಿ. ಪುನರ್‌ಬಳಕೆ ಕಸದ ಬುಟ್ಟಿಗಳಿಗೆ – ಬಿಳಿ

ಸಿ. ಇತರೆ ಕಸದ ಬುಟ್ಟಿಗಳಿಗೆ – ಕಪ್ಪು

**10. ಎಸ್‌ಡಬ್ಲ್ಯೂಎಂನ ರಾಜ್ಯ ಯುಡಿ ನೀತಿ ಹೇಳುವುದು/ State UD Policy on SWM says –** ದೊಡ್ಡನಗರಗಳಲ್ಲಿ ಪ್ರತಿ 1000 ಮನೆಗಳಿಗೆ, ಅವುಗಳ ತ್ಯಾಜ್ಯ ಉತ್ಪಾದನೆಯ ಪ್ರಮಾಣಕ್ಕನುಗುಣವಾಗಿ 7 $m^3$ ಕಂಟೈನರ್‌ಗಳನ್ನು ಇಡಬೇಕು. ದೊಡ್ಡಪ್ರಮಾಣದಲ್ಲಿ ತ್ಯಾಜ್ಯ ಉತ್ಪಾದನೆಯಾಗುವ ವಾಣಿಜ್ಯ ಪ್ರದೇಶಗಳಲ್ಲಿ, ಮಾರುಕಟ್ಟೆ ಪ್ರದೇಶಗಳಲ್ಲಿ ಮತ್ತು ಇತರ ಸ್ಥಳಗಳಲ್ಲಿ ಹೆಚ್ಚುವರಿ ಕಸದ ಬುಟ್ಟಿಗಳನ್ನು ಇಡಬಹುದು. 4.85 m x 3 m ಅಳತೆಯಲ್ಲಿ ಸಿಮೆಂಟ್ ಕಾಂಕ್ರೀಟ್‌ನಿಂದ ಕಟ್ಟಿದ ಕಟ್ಟೆಯ ಮೇಲೆ ಕಂಟೈನರ್‌ಗಳನ್ನು ಇಡಬೇಕಾಗುತ್ತದೆ. ಸುರಿಯುವ ಸ್ಥಳಕ್ಕೆ ತೆಗೆದುಕೊಂಡುವವರು ಅಥವಾ ಟ್ರ್ಯಾಕ್ಟರ್‌ಗಳ ಮೂಲಕ ಮಾಧ್ಯಮಿಕ ಕಂಟೈನರ್‌ಗಳನ್ನು ಸಾಗಿಸಬೇಕು.

## 11. ಬಿಬಿಎಂಪಿಯ ಎಸ್‌ಡಬ್ಲ್ಯೂಎಂನ ಮೇಲೆ ಸಿಎಜಿ ವರದಿ ಸಾರಾಂಶ.

ಸಿಎಜಿಯು, ಬಿಬಿಎಂಪಿಯ ಎಸ್‌ಡಬ್ಲ್ಯೂಎಂನ ಮೇಲಿನ ತನ್ನ ವರದಿಯಲ್ಲಿ (Report No.5 of the year 2014), ಬಿಬಿಎಂಪಿಯ ಈ ಕೆಳಕಂಡ ಮಾಧ್ಯಮಿಕ ಶೇಕರಣೆಗಳನ್ನು ಅಳವಡಿಸಿರುವ ಬಗ್ಗೆ ಟೀಕಿಸಿದೆ:

**"ಶೇಕರಣೆ"**

"ಶೇಕರಣೆ ಎಂದರೆ, ಕಸ ಚಲ್ಲುವುದು, ರೋಗವಾಹಕಗಳನ್ನು ಮತ್ತು ಬೀದಿ ಪ್ರಾಣಿಗಳನ್ನು ಆಕರ್ಷಿಸುವುದನ್ನು ಮತ್ತು ಕೆಟ್ಟವಾಸನೆ ಹೆಚ್ಚಿಸಲು ಕಾರಣವಾಗುವುದನ್ನು ತಪ್ಪಿಸುವುದು ಎಂದು ಅರ್ಥ. **ಎಂಎಸ್‌ಡಬ್ಲ್ಯೂ ನಿಯಮಗಳ ಪ್ರಕಾರ, ಶೇಕರಿಸಿದ ತ್ಯಾಜ್ಯವು ತೆರೆದ ವಾತಾವರಣಕ್ಕೆ ಹೊರ ಚಲ್ಲಬಾರದು, ಏಕೆಂದರೆ ಇದರಿಂದ ಅನೈರ್ಮಲ್ಯ ಮತ್ತು ಅಶೌಚ ಪರಿಸ್ಥಿತಿಗೆ ಕಾರಣವಾಗಬಹುದು. ಕೈಯಿಂದ ನಿರ್ವಹಣೆ ಮಾಡುವುದನ್ನು ನಿಷೇಧಿಸಬೇಕು** ಮತ್ತು ತುಂಬಾ ತೊಡಕಿದ್ದು, ಅನಿವಾರ್ಯವೆನಿಸಿದ ಸಂದರ್ಭದಲ್ಲಿ ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಂಡಿರಬೇಕು"

"ಬಿಬಿಎಂಪಿಯು ಸ್ಥಾಪಿತ ಶೇಕರಣಾ ಸೌಲಭ್ಯಗಳ ವಿವರಗಳನ್ನು ಕೊಟ್ಟಿಲ್ಲ ಮತ್ತು ನಿರ್ವಹಣೆ ಮಾಡಿಲ್ಲ. ಆದ್ದರಿದಂದ, ಸೂಕ್ತ ಹಾಗೂ ಸಾಕಷ್ಟು ಶೇಕರಣಾ ಸೌಲಭ್ಯಗಳ ಖಾತರಿಗಾಗಿ ಬಿಬಿಎಂಪಿಯು ತೆಗೆದುಕೊಂಡ ಕ್ರಮದ ಬಗ್ಗೆ ಪರಿಶೀಲಿಸಲು ಈ ಆಡಿಟ್‌ನಲ್ಲಿ ಸಾಧ್ಯವಾಗಿಲ್ಲ. ಒಪ್ಪಂದದಲ್ಲಿ ಒಪ್ಪಿರುವಂತೆ ಸೇವೆ ಒದಗಿಸುವವರು ಕೂಡ ಶೇಕರಣೆ ಆದ್ಯತೆ ಬಗ್ಗೆ ಸೇರಿಸಿಲ್ಲ, ಅಂದರೆ ತ್ಯಾಜ್ಯವನ್ನು ಸಂಗ್ರಹಿಸಿ ನಿಗದಿತ ಸ್ಥಳಕ್ಕೆ ಸಾಗಾಟ ಮಾಡಿರುವ ಬಗ್ಗೆ ತಿಳಿಸಿಲ್ಲ. **ಆದಾಗ್ಯೂ, ನಗರದಲ್ಲಿ ರಸ್ತೆ ಬದಿಗಳಲ್ಲಿ ಅನಧಿಕೃತವಾಗಿ ಕಸ ಸುರಿಯುತ್ತಿರುವುದು ಕಂಡು ಬಂದಿದ್ದು, ಇದು ಕೆಟ್ಟ ವಾಸನೆ ಹರಡುತ್ತಿದೆ ಮತ್ತು ಪರಿಸರಾತ್ಮಕ ಮಾಲಿನ್ಯವನ್ನು ಸೃಷ್ಟಿಸುತ್ತಿದೆ. ಯಾವುದೇ ಸೂಕ್ತ ಸುರಕ್ಷಾ ಕ್ರಮಗಳಿಲ್ಲದೇ ಕೈಯಿಂದಲೇ ತ್ಯಾಜ್ಯ ನಿರ್ವಹಣೆ ಮತ್ತು ಸಾಗಾಟ ಮಾಡುತ್ತಿರುವುದು ಕಂಡು ಬಂದಿದೆ. ಇದು ಎಂಎಸ್‌ಡಬ್ಲ್ಯೂ ನಿಯಮಗಳ ಉಲ್ಲಂಘನೆ ಮಾತ್ರವಾಗಿರದೇ, ಅನೈರ್ಮಲ್ಯ ಪರಿಸ್ಥಿತಿಗಳಿಂದಾಗಿ ಆರೋಗ್ಯಕ್ಕೆ ತೊಂದರೆಯಾಗುತ್ತಿದೆ ಮತ್ತು ಪರಿಸರ ಕಲುಷಿತಗೊಳ್ಳುತ್ತಿದೆ."**

ರಾಜ್ಯ ಸರ್ಕಾರವು ತಿಳಿಸಿರುವಂತೆ (ಜನವರಿ 2014), ತ್ಯಾಜ್ಯದ ಬಹುವಿಧದ ನಿರ್ವಹಣೆ ಮಾಡುವುದನ್ನು ತಪ್ಪಿಸಲು ಮತ್ತು ಹಸುಗಳು ಮತ್ತು ನಾಯಿಗಳು ರೀತಿಯಲ್ಲಿ ಪ್ರಾಣಿಗಳನ್ನು ಸೆಳೆಯುತ್ತಿರುವುದನ್ನು ತಪ್ಪಿಸಲು ಎಲ್ಲಾ ಕಸದ ಬುಟ್ಟಿಗಳನ್ನು ಸಂಪೂರ್ಣವಾಗಿ ತೆಗೆದುಹಾಕಲಾಗಿದೆ. **ಕಸದ ಬುಟ್ಟಿಗಳನ್ನು ತೆಗೆದಿರುವುದರಿಂದ ಜಗುಲಿಗಳು ಅಥವಾ ರಸ್ತೆಗಳ ಮೇಲೆ ಕಸ ಸುರಿಯುತ್ತಿರುವುದನ್ನು ಒಪ್ಪಿಕೊಳ್ಳಲಾಗುವುದಿಲ್ಲ / ಕಸದ ಬುಟ್ಟಿ/ತೊಟ್ಟಿಗಳು ತುಂಬಿ ಕಸದ ಹೊರ ಹರಿವು ಆಗುತ್ತಿರುವ ಬಗ್ಗೆ ಆಡಿಟ್‌ನಲ್ಲಿ ಗುರ್ತಿಸಲಾಗಿದೆ. ಉಲ್ಲೇಖಿಸಲಾಗಿದೆ.**

**12. ವಿಕೇಂದ್ರೀಕೃತ ಸಂಸ್ಕರಣಾ ಸೌಲಭ್ಯ/ಪಿಡಿಎಫ್‌ಗಾಗಿ ಭೂಮಿ: 'Decentralized Processing Facility'(DPF)**

ಟೆಂಡರ್‌ನಲ್ಲಿ ತಿಳಿಸುತ್ತದೆ: "ಭೂಮಿಯ ಲಭ್ಯತೆಗೆ ಅನುಗುಣವಾಗಿ, ಹಸಿ ತ್ಯಾಜ್ಯದ ನಿರ್ವಹಣೆಗಾಗಿ 'ವಿಕೇಂದ್ರೀಕೃತ ಸಂಸ್ಕರಣಾ ಸೌಲಭ್ಯ' (DPF)" ಅಭಿವೃದ್ಧಿಪಡಿಸಬೇಕು ಮತ್ತು ಸೇವೆ ಒದಗಿಸುವವರು CoSDಯ 12 ತಿಂಗಳ ಒಳಗೆ ಹಾಗೂ ಪ್ಯಾಕೇಜ್‌ನ ವ್ಯಾಪ್ತಿಯೊಳಗೆ 'ವಿಕೇಂದ್ರೀಕೃತ ಸಂಸ್ಕರಣಾ ಸೌಲಭ್ಯ DPF ಸ್ಥಾಪಿಸಲು ಶ್ರಮಿಸಬೇಕು.." ಬಿಬಿಎಂಪಿಯಲ್ಲಿ ಅಥವಾ ಗುತ್ತಿಗೆದಾರರಲ್ಲಿ ಇಂತಹ ವಿಶಾಲವಾದ ಸೂತ್ರೀಕರಣ ಇಲ್ಲದಿರುವುದರಿಂದ, ಸ್ಥಳೀಯ ಪಿಡಿಎಫ್‌ಗಳು ಎಲ್ಲಾ ಕಡೆ ನಿಜರೂಪಕ್ಕೆ ಬರುವುದಿಲ್ಲ. ಸರ್ಕಾರಿ ಭೂಮಿ ಇಲ್ಲದಿದ್ದ ಪಕ್ಷದಲ್ಲಿ, ಬಿಬಿಎಂಪಿಯು ಕಡ್ಡಾಯವಾಗಿ ಮಾರಾಟಗಾರರಿಂದಾಗಲೀ ಅಥವಾ ಅಗತ್ಯವಿರುವ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡು, ಪ್ರತಿಯೊಂದೂ ವಾರ್ಡ್‌ನಲ್ಲೂ ಕನಿಷ್ಠ ಒಂದರಂತೆ ಪಿಡಿಎಫ್‌ನ್ನು ಸ್ಥಾಪಿಸಬೇಕು.

**13. ಪರಿಚ್ಛೇದ 10 – ಪ್ರಗತಿ ಮಾನದಂಡಗಳು ಮತ್ತು ಹಾನಿಗಳನ್ನು ಸರಿಪಡಿಸುವುದು.**

ಸಾಧನೆ ಅಥವಾ ಪ್ರಗತಿಯ ಮಾನದಂಡಗಳನ್ನು ನಿಗಧಿಮಾಡಿ, ವಿಂಗಡಿಸಿದ ವಿವಿಧ ತ್ಯಾಜ್ಯಗಳ ಸಂಗ್ರಹಣೆಯನ್ನು ವಿವಿಧ ವಿಭಾಗಗಳ ಮೂಲಕ ಸಂಗ್ರಹಣೆ ಮಾಡುವ ವ್ಯವಸ್ಥೆ ಕಲ್ಪಿಸಬೇಕು; ಅಂದರೆ ಸ್ಥಳೀಯವಾಗಿಯೇ ಕಸದ ಸಂಸ್ಕರಣೆ ಮಾಡುವುದು; ಉತ್ಪನ್ನಗಳಿಂದ (ಅನಿಲ ಅಥವಾ ಗೊಬ್ಬರ) ಆದಾಯ ಗಳಿಸುವುದು; ಬಳಸಿದ ಪುನರ್‌ಬಳಕೆಗಳ ಪ್ರಮಾಣ ಮತ್ತು ಖಾಲಿಜಾಗ/ಗುಂಡಿಗಳನ್ನು ಮುಚ್ಚಲು ಕಡಿಮೆ ಪ್ರಮಾಣದಲ್ಲಿ ಕಳುಹಿಸುವುದು.

**14. ದೊಡ್ಡ ಪ್ರಮಾಣದ ತ್ಯಾಜ್ಯ ಮತ್ತು ಇತರೆ ತ್ಯಾಜ್ಯಗಳ ಸಂಗ್ರಹಣೆ:**

- ಹಾಸಿಗೆಗಳು, ಹೊದಿಕೆಗಳು, ಮುರಿದ ಕಮೋಡ್‌ಗಳು, ಮತ್ತಿತ್ಯಾದಿ ದೊಡ್ಡ ಪ್ರಮಾಣದ ತ್ಯಾಜ್ಯವನ್ನು ಪ್ರತಿ ತಿಂಗಳ ಆಧಾರದಲ್ಲಿ, ಅಂದರೆ ಸಂಗ್ರಹಿಸುವ ದಿನಾಂಕಗಳನ್ನು, ಉದಾಹರಣೆಗೆ ಪ್ರತಿ ತಿಂಗಳ ಮೊದಲ ಶನಿವಾರ, ದಿನಾಂಕ ನಿಗಧಿಪಡಿಸಿ ಸಂಗ್ರಹಿಸಬೇಕು. ನಿಗಧಿಪಡಿಸಿದ ದಿನಾಂಕಗಳನ್ನು ಹೊರತುಪಡಿಸಿ, ಯಾರಾದರೂ ತಮ್ಮ ಆ ತ್ಯಾಜ್ಯವನ್ನು ಇತರೆಡೆಯಲ್ಲಿ ತಂದು ಸುರಿಯುವುದು/ಎಸೆಯುವುದು ಮಾಡಿದರೆ, ಅಂತಹವರಿಗೆ ದಂಡ ವಿಧಿಸಬೇಕು.

- ಬ್ಯಾಟರಿಗಳು ಅಥವಾ ಟ್ಯೂಬ್‌ಲೈಟ್‌ಗಳಂತಹ ಅಪಾಯಕಾರಿ ತ್ಯಾಜ್ಯವನ್ನು, ಮನೆಗಳಿಂದ ತಿಂಗಳ ಆಧಾರದಲ್ಲಿ ಸಂಗ್ರಹಿಸಬೇಕು ಅಥವಾ DWCCs ಒಣ ತ್ಯಾಜ್ಯ ಸಂಗ್ರಹಣೆ ಕೇಂದ್ರಗಳಲ್ಲಿ Drop-off Centre/ತಂದು ಕೊಡುವ ಕೇಂದ್ರವನ್ನು ಪ್ರಾರಂಭಿಸಬೇಕು. ಶಿಕ್ಷಿಸಬೇಕು. ತಗ್ಗು ಅಥವಾ ಖಾಲಿಜಾಗವನ್ನು ಮುಚ್ಚಲು ಅವುಗಳನ್ನು ಬಳಸಬಾರದು.

- ನಿರ್ಮಾಣ ಅವಶೇಷಗಳನ್ನು ಆ ಸ್ಥಳದಿಂದ ಹೇಗೆ ತೆಗೆದುಕೊಂಡು ಹೋಗಲಾಗುತ್ತದೆ ಎಂಬುದು ಇದರಲ್ಲಿ ಸ್ಪಷ್ಟವಾಗಿಲ್ಲ. ಒಂದು ದೂರವಾಣಿ ಸಂಖ್ಯೆಯಿರಬೇಕು, ನಿರ್ಮಾಣ ಅವಶೇಷಗಳೇನಾದರೂ

ಇದ್ದ ಸಂದರ್ಭದಲ್ಲಿ ಅವುಗಳನ್ನು ತೆಗೆದುಕೊಂಡು ಹೋಗುವಂತೆ ಸಾರ್ವಜನಿಕರು ಆ ದೂರವಾಣಿಗೆ ಕರೆ ಮಾಡಬಹುದು. ಅವರು ಆ ತ್ಯಾಜ್ಯದ ತೂಕ ಅಥವಾ ಪ್ರಮಾಣಕ್ಕನುಗುಣವಾಗಿ ಶುಲ್ಕ ಪಾವತಿಸಬಹುದು.

**15. ಹೆಚ್ಚುವರಿ/ಕಾದಿರಿಸಿದ ಸಿಬ್ಬಂದಿ**

ಸಿಬ್ಬಂದಿ ರಜೆ ತೆಗೆದುಕೊಂಡಾಗ/ಗೈರು ಹಾಜರಾದ ಸಂದರ್ಭದಲ್ಲಿ, ಆ ಜಾಗವನ್ನು ತುಂಬಲು 7ನೇ 1ರಷ್ಟು ಹೆಚ್ಚುವರಿ ಸಿಬ್ಬಂದಿಯೊಂದಿಗೆ ಶೇಕಡ 20%ರಷ್ಟು ಕಾದಿರಿಸಿದ ಸಿಬ್ಬಂದಿಯನ್ನು ನೇಮಿಸಿಕೊಳ್ಳಬೇಕು.

ಟೆಂಡರ್ ತಿಳಿಸುವಂತೆ, 'ಅಗತ್ಯವಿದ್ದರೆ' ಬಿಡ್ಡರ್‌ಗಳು ಮಾತ್ರವೇ ಹೆಚ್ಚುವರಿ ಸಿಬ್ಬಂದಿಯನ್ನು ನೇಮಿಸಿಕೊಳ್ಳಬೇಕು. 1/7 (ರೊಟೇಷನ್ ಆಧಾರದಲ್ಲಿ ಪ್ರತಿಯೊಬ್ಬ ಕೆಲಸಗಾರನಿಗೆ ಒಂದು ಪೂರ್ತಿ ದಿನ ವಿರಾಮ (ರೆಸ್ಟ್) ಒದಗಿಸುವುದಕ್ಕೆ + ಆ ರಜೆ ಅಥವಾ ಗೈರು ದಿನಗಳಂದು ಅವರಿಗೆ ಪರ್ಯಾಯವಾಗಿ ಕೆಲಸ ಮಾಡಲು ಶೇಕಡ 20% ರಷ್ಟು ಹೆಚ್ಚುವರಿ ಸಿಬ್ಬಂದಿ ಕಡ್ಡಾಯವಾಗಿ ಇರುವಂತೆ ಟೆಂಡರ್‌ನಲ್ಲಿ ಕಡ್ಡಾಯವಾಗಿರಬೇಕು.

**16. ಹೆಚ್ಚುವರಿ/ಕಾದಿರಿಸಿದ ಸಿಬ್ಬಂದಿ**

ಟೆಂಡರ್‌ನಲ್ಲಿ, ಎಲ್ಲಾ ಸಲಕರಣೆಗಳು, ಪರಿಕರಗಳು ಮತ್ತು ವಾಹನಗಳನ್ನು ಸ್ವಚ್ಛಗೊಳಿಸಲು ವ್ಯವಸ್ಥೆ ಕಲ್ಪಿಸುವುದು ಸೇವೆ ಒದಗಿಸುವವರ ಜವಾಬ್ದಾರಿಯಾಗಿರುತ್ತದೆ. ಪ್ರತಿದಿನದ ಬದಲು, ಹಲವು ದಿನಗಳಿಗೊಮ್ಮೆ ಸ್ವಚ್ಛಗೊಳಿಸಬೇಕು. ಇದರಿಂದ ಸೋಂಕಿನ ಕಾಯಿಲೆಗಳು ಕೆಲಸಗಾರರಿಗೆ ತಗಲದಂತೆ ತಡೆಯಬಹುದು. ಸಲಕರಣೆಗಳು, ಯಂತ್ರೋಪಕರಣಗಳು ಮತ್ತು ವಾಹನಗಳನ್ನು ಜೈವಿಕ ಶುಚಿಕಾರಕಗಳಿಂದ ಸ್ವಚ್ಛಗೊಳಿಸಬೇಕು ಮತ್ತು ಪೆನಾಯಿಲ್ ಬಳಸಬಾರದು, ಏಕೆಂದರೆ ಇದು ಗೊಬ್ಬರವಾಗುವ ಪ್ರಕ್ರಿಯೆಗೆ ನೆರವಾಗಬಲ್ಲ ಬ್ಯಾಕ್ಟೀರಿಯಾಗಳನ್ನು ಸಾಯಿಸುತ್ತದೆ.

ಈ ಸಲಹೆಗಳನ್ನು ವಿಶ್ವಾಸದಿಂದ ಸ್ವೀಕರಿಸುತ್ತೀರಿ ಎಂದು ನಂಬಿದ್ದೇವೆ.

ತಮ್ಮ ವಿಶ್ವಾಸಿ,

ಕಾತ್ಯಾಯಿನಿ ಚಾಮರಾಜ್,
ಕಾರ್ಯನಿರ್ವಾಹಕ ಟ್ರಸ್ಟೀ,
97318 17177